Number of Deaf and Dumb Girls residing in the Vocational Institute at Mysore.

*Q.—142. Smt. K. S. NAGARATHNAMMA (Gundlupet).—

Will the Government be pleased to state :—

(a) the number of deaf and dumb girls residing in the Vocational Institute, Mysore ;

(b) whether they have made any arrangements to give training in the said Institute to the physically handicapped, so as to enable them to eke out their livelihood ;

(c) whether any other institution has come forward to provide training to the physically handicapped in the State ?

A.—Sri S. R. KANTHI (Minister for Education).—

(a) 19 Deaf girls.

(b) Industrial sections have been opened in the physically handicapped Institutions in order to provide training in crafts.

(c) Three private agencies have come forward to start Institutions for the physically handicapped :—

1 Janapada Seva Trust, Melkote.
2 Mathru Mandali, Temple Road, V. V. Mohalla, Mysore-2.
3 The Academy of General Education, Manipal, South India.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಉತ್ತರದಲ್ಲಿ 19 ಜನ ಮೂಗ ಬಾಲಕೀಯರು ಎಂದು ಹೇಳಿದೆ. ನಾನು ಮೂಗರು ಮತ್ತು ಕಿವುಡರು ಎರಡು ಪಂಗಡದವರ ಬಗ್ಗೆಯೂ ಮಾಹಿತಿಯನ್ನು ಕೇಳಿದ್ದೆನು. ಆದ್ದರಿಂದ ಇಲ್ಲಿ ಕಿವುಡರ ಸಂಖ್ಯೆ ಎಷ್ಟು ?

†ಶ್ರೀ ಎಸ್. ಆರ್. ಕಂಠಿ.—18 ಜನ ಕುರುಡರೂ, 19 ಜನ ಕಿವುಡರೂ ಇದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಪಾಠಶಾಲೆಗೆ ಕೊಡತಕ್ಕ ಸ್ಕಾಲರ್‌ಷಿಪ್‌ಗಳೆಷ್ಟು ?

ಶ್ರೀ ಎಸ್. ಆರ್. ಕಂಠಿ.—ಆ ಮಾಹಿತಿ ಈಗ ನನ್ನಲ್ಲಿಲ್ಲ. ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಪಾಠಶಾಲೆಗೆ ಗ್ರಾಂಟೆಷ್ಟು ಕೊಡಲಾಗಿದೆ ?

ಶ್ರೀ ಎಸ್. ಆರ್. ಕಂಠಿ.—ಆ ಮಾಹಿತಿಕೂಡ ಈಗ ನನ್ನಲ್ಲಿಲ್ಲ.

ಶ್ರೀ ಕೆ. ಎಸ್. ನಾಗರತ್ನಮ್ಮ.—ನಾನು ಮೊನ್ನೆ ಅಲ್ಲಿ ನಡೆದ ವಿಚಾರಿಗೆ ಹೋಗಿದ್ದೆ. ಅಲ್ಲಿರತಕ್ಕ ಹುಡುಗರೆಲ್ಲಾ ಅನಿಮಲ್ಸ್ ಇದ್ದಹಾಗೆ ಇರುತ್ತಾರೆ. ಅದಕ್ಕೆ ನಾನು ಈ ವಿಚಾರಗಳನ್ನ ಕೇಳಿದೆ. ನನಗೆ ಇನ್‌ಫರ್‌ಮೇಷನ್ನೇ ಇಲ್ಲದ ಮೇಲೆ ನಾನಿನ್ನು ಪ್ರಶ್ನೆಯೇಕೆ ಕೇಳಬೇಕು ? ಇದನ್ನು ಹೆಲ್ಡ್‌ಓವರ್ ಆದರೂ ಮಾಡಿ.....

ಶ್ರೀ ಎಸ್. ಆರ್. ಕಂಠಿ.—ನೀವು ಬಾಕಿ ಪ್ರಶ್ನೆಗಳನ್ನು ಕೇಳಿ. ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಹೆಲ್ಡ್‌ಓವರ್ ಮಾಡಿ... .....

Mr. SPEAKER.—Are there any other supplementaries ?

Smt. K. S. NAGARATHNAMMA.—There are severals upplementaries.

†Indicates that the remarks or speeches have not been revised by the members concerned.

Mr. SPEAKER.—Let her kindly put them in writing and pass them on to me by evening today. I will pass them on and have the replies ready. I will hold over the question and I will call it after one week. In one week it must be over and there is no question of extension of time after a week.

Sri S. R. KANTHI.—Yes.

Mr. SPEAKER.—The question is held over.

Gomal Land in Pensamudra Village of Channagiri Taluk.

*Q.—158. Sri T. D. DEVENDRAPPA (Bhadravathi).—

Will the Government be pleased to state :—

(a) the present strength of cattle in Pensamudra Village of Ubrani Hobli, Channagiri Taluk ;

(b) the extent of gomal land retained for grazing of these cattle ;

(c) the extent of gomal land cultivated unauthorisedly in the said village ?

A.—Sri M. V. KRISHNAPPA (Minister for Revenue).—

(a) 377.

(b) 74-27 acres.

(c) 14 acres.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ 377 ರಾಸುಗಳು ಎಂದು ಹೇಳಿದ್ದೀರಿ. 100 ರಾಸುಗಳಿಗೆ 30 ಎಕರೆ ಜಮೀನು ರಿಜರ್ವ್ ಆಗಿರಬೇಕು ಎಂಬುದಾಗಿ ಗೋಮಾಳಕ್ಕೆ ಸಂಬಂಧಪಟ್ಟ ರೂಲ್ಸ್‌ನಲ್ಲಿದೆ. (ಬಿ) ಪ್ರಶ್ನೆಗೆ ಉತ್ತರವಾಗಿ ಕೇವಲ 74 ಎಕರೆ ಚಿಲ್ಲರೆ ಗೋಮಾಳ ಜಮೀನು ಇದೆಯೆಂದು ಹೇಳಿದ್ದೀರಿ. ಇನ್ನು 14 ಎಕರೆಯಷ್ಟು ಎಕ್ರೋಚ್‌ಮೆಂಟ್ ಆಗಿದೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—100 ರಾಸುಗಳಿಗೆ 30 ಎಕರೆ ಜಮೀನು ಇರಬೇಕು ಎಂದು ರೂಲ್ಸ್ ನಲ್ಲಿದೆ. ಈಗ ರಾಸುಗಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಆದರೆ ಭೂಮಿಯ ವಿಸ್ತೀರ್ಣವನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ರಾಸುಗಳ ಸಂಖ್ಯೆ ಜಾಸ್ತಿಯಾಗಿ ನಮ್ಮಲ್ಲಿ ಗೋಮಾಳ ಕಡಿಮೆ ಬಿದ್ದಿದೆ. ಆದರೆ ರೈತರಿಂದ ಜಮೀನು ಕಿತ್ತುಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—(ಸಿ) ಪ್ರಶ್ನೆಗೆ ಉತ್ತರವಾಗಿ 14 ಎಕರೆಗಳು ಎಂದು ಹೇಳಿದ್ದಾರೆ. ಈರೀತಿ ಅನಧಿಕೃತವಾಗಿ ಸಾಗುಮಾಡುತ್ತಿರುವುದರಿಂದ ಅಂತಹವರ ಮೇಲೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಬಿಟ್ಟುಕೊಡಬೇಕೆಂದು ನೋಟೀಸ್ ಕೊಟ್ಟಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ.—ಎಷ್ಟುವರ್ಷಗಳಿಂದ ಅಕ್ರಮ ಸಾಗುವಳಿಮಾಡುತ್ತಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಂದೆರಡು ವರ್ಷಗಳಿಂದ ಮಾಡುತ್ತಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ದನಗಳಿಗೆ ಬಿಟ್ಟಿರತಕ್ಕ 14 ಎಕರೆ ಗೋಮಾಳ ಭೂಮಿಯನ್ನ ಅನಧಿಕೃತ ಸಾಗುವಳಿ ಮಾಡಿರತಕ್ಕವರಿಗೇನೇ ಬಿಟ್ಟುಕೊಡುವ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೋಮಾಳದ ಜಮೀನು ಬಹಳ ಕಡಿಮೆ ಇದ್ದರೆ ಅದನ್ನು ಬಿಟ್ಟು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದಲೇ ಲ್ಯಾಂಡ್ ರೆವಿನ್ಯೂ ಕೋಡಿನ ಸೆಕ್ಷನ್ 209ರ ಪ್ರಕಾರ ಅವರಿಗೆ ನೋಟೀಸ್ ಕೊಟ್ಟು ಆ ಜಮೀನನ್ನು ಬಿಟ್ಟು ಕೊಡಬೇಕೆಂದು ಕ್ರಮ ತೆಗೆದುಕೊಂಡಿದ್ದೇವೆ.